ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: DCE/BUD/GCC/11/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ:23.05.2022.

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ / ಖಾಸಗಿ ಅನುದಾನಿತ ಪದವಿ ಮತ್ತು ಬಿ.ಎಡ್ ಕಾಲೇಜುಗಳ ಬೋಧಕರು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ 2006 ಮತ್ತು 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ವಯ ವೇತನ ವ್ಯತ್ಯಾಸದ ಮೊತ್ತ ಪಾವತಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ : ಇಡಿ 58 ಹೆಚ್ ಪಿ ಸಿ 2022 ದಿ.27.04.2022

2) ಸರ್ಕಾರದ ಪತ್ರ ಸಂಖ್ಯೆ : ಇಡಿ 306 ಯು.ಎನ್.ಇ 2021,
ದಿ. 25.02.2022, ದಿ. 05.03.2022 ಮತ್ತು ದಿ. 09.03.2022.

3) ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:17.05.2022.

*****

ಉಲ್ಲೇಖ (3) ರ ಈ ಕಛೇರಿಯ ಸುತ್ತೋಲೆ ದಿನಾಂಕ:17.05.2022ರಲ್ಲಿ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ /ನಿವೃತ್ತಿ ಹೊಂದಿರುವ ಬೋಧಕರು ತತ್ಸಮಾನ ವೃಂದದವರಿಗೆ ಈಗಾಗಲೇ ಹೆಚ್ಚುವರಿಯಾಗಿ ಪಾವತಿಸಿರುವ ಮತ್ತು ಇನ್ನೂ ಪಾವತಿಸಬೇಕಾಗಿರುವ 2006ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಂತೆ ಹಿಂಬಾಕಿ ಮತ್ತು 2016ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಂತೆ ಹಿಂಬಾಕಿ ಮೊತ್ತಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು (ಅನುಬಂಧ-1 ರಿಂದ 4) ದಿನಾಂಕ:23.05.2022ರೊಳಗಾಗಿ ಲೀಡ್ ಕಾಲೇಜಿನ ಪ್ರಾಂಶುಪಾಲರುಗಳಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಮುಂದುವರೆದು, ಲೀಡ್ ಕಾಲೇಜಿನ ಪ್ರಾಂಶುಪಾಲರುಗಳು ದಿನಾಂಕ:23.05.2022ರ ಸಂಜೆ 5.30ರ ಒಳಗಾಗಿ ಹಾರ್ಡ್ ಮತ್ತು ಸಾಫ್ಟ್ ಕಾಪಿಯನ್ನು ಸಲ್ಲಿಸಿದ ಕಾಲೇಜುಗಳ ಪಟ್ಟಿಯನ್ನು ಇ-ಮೇಲ್ ವಿಳಾಸ dcebudgetindent@gmail.comಗೆ ಸಲ್ಲಿಸಲು ಸೂಚಿಸಲಾಗಿದೆ ಹಾಗೂ ಅಪೇಕ್ಷಿತ ಮಾಹಿತಿಯನ್ನು ನಿಗದಿತ ಕೊನೆಯ ದಿನಾಂಕ:25.05.2022ರೊಳಗಾಗಿ **ಕಡ್ಡಾಯವಾಗಿ** ಸಲ್ಲಿಸುವಂತೆ ಮತ್ತೊಮ್ಮೆ ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

ಇಲಾಖಾ ವ್ಯಾಪ್ತಿಯ ಎಲ್ಲಾ ಜಂಟಿ ನಿರ್ದೇಶಕರುಗಳು/ಎಲ್ಲಾ ಲೀಡ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು:-

(1) ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಇವರ ಸುತ್ತೋಲೆಯನ್ನು ವೆಬ್‌ಸೈಟ್ ನಲ್ಲಿ ಅಳವಡಿಸಲು ಸೂಕ್ತ ಕ್ರಮಕ್ಕಾಗಿ.

(2) ಕಛೇರಿ ಪ್ರತಿ.